# ಶಂಕುಗಳ ವಿಶ್ವಸುಂದರಿ

## ಕ್ಯೂಬಾ ಪೇಂಟೆಡ್ ಶಂಕುಹುಳ



ಚಿತ್ರಕೃಪೆ: ವಿಕಿಕಾಮನ್ಸ್

■ ಎಂ. ಸತ್ಯನಾರಾಯಣ ರಾವ್

ವಿಶ್ವದ ಅತಿ ಸುಂದರ, ಮನಮೋಹಕವಾದ, ವರ್ಣರಂಜಿತವಾದ ಏಳು ಬಗೆಯ ಶಂಕುಹುಳಗಳಲ್ಲಿ ‘ಕ್ಯೂಬಾ ಪೇಂಟೆಡ್ ಶಂಕುಹುಳ’ ಕೂಡ ಒಂದು! ಇದೊಂದು ವರ್ಣಕಲಾತ್ಮಕ ಬಸವನಹುಳ! ಇದರ ಮತ್ತೊಂದು ಹೆಸರು ಮೂಡಲ ಮರದ ಶಂಕುಹುಳು (ಓರಿಯಂಟ್ ಟ್ರೀ ಸ್ನೇಲ್). ವೈಜ್ಞಾನಿಕ ಹೆಸರು ಪೊಲಿಮಿಟಾ ಪಿಕ್ಟಾ (polimita picta).

ಏಳು ಬಗೆಯ ಶಂಕುಹುಳಗಳಲ್ಲಿ ಪ್ರಶ್ನಾತೀತ ಸುಂದರಿ ಎಂದರೆ, ಅದು ಕ್ಯೂಬಾ ಪೇಂಟೆಡ್ ಶಂಕುಹುಳ ಎನ್ನಬಹುದು! ಸೌಂದರ್ಯ ಸ್ಪರ್ಧೆಯಲ್ಲಿ ಕ್ಯೂಬಾ ಪೇಂಟೆಡ್ ಶಂಕುಹುಳಕ್ಕೆ ಪ್ರಥಮ ಸ್ಥಾನ! ನಮ್ಮ ಭಾಷೆಯಲ್ಲಿ ಹೇಳುವುದಾದರೆ ‘ವಿಶ್ವಸುಂದರಿ’! ‘ಪೊಲಿಮಿಟಾ ಪಿಕ್ಟಾ’ ಎಂದರೆ ‘ಬಗೆಬಗೆಯ ಬಣ್ಣಗಳ ಪಟ್ಟೆಗಳ ಕಲಾತ್ಮಕ ವರ್ಣರಂಜಿತ ಶಂಕುಹುಳ’ ಎಂದರ್ಥ! ಪೊಲಿಮಿಟಾ ಒಂದು ಗ್ರೀಕ್ ಪದ. ಪೊಲಿ ಅಂದರೆ ‘ಅನೇಕ’, ಮಿಟಾ ಅಂದರೆ ‘ನೂಲುಗಳು’ ಅಥವಾ ‘ಪಟ್ಟೆಗಳು’!

ಪಿಕ್ಟಾ ಒಂದು ಲ್ಯಾಟಿನ್ ಪದ– ಪಿಂಗೂ ಅರ್ಥಾತ್ ಬಣ್ಣ ಬಳಿದ, ಅಲಂಕೃತ, ವರ್ಣರಂಜಿತ, ಅತಿ ಆಡಂಬರದ ವಿನ್ಯಾಸವುಳ್ಳ ಶಂಕುಚಿಪ್ಪುಗಳು!

ಶಂಕುಚಿಪ್ಪೆ ಮೇಲೆ ಅತ್ಯದ್ಭುತ ಪ್ರಕಾಶಮಾನವಾದ ಹಳದಿ, ಕೆಂಪು, ಬಿಳಿ ಮತ್ತು ಕಪ್ಪು ಬಣ್ಣಗಳ ಜಟಿಲ ಕಲಾತ್ಮಕ ಪಟ್ಟೆಗಳಿರುತ್ತವೆ. ಇವು ಸಂಕೀರ್ಣ ಚಿತ್ರಕಲೆಯಂತೆ ತೋರುತ್ತವೆ.

ಇದರ ಅಂದಕ್ಕೆ ಮಾರುಹೋಗದ ಮಂದಿಯೇ ಇಲ್ಲ. ಇದೊಂದು ಜೀವಂತ ಕಲೆ. ಸೃಷ್ಟಿಕರ್ತನೇ ಕಲಾಕಾರನಾಗಿ ಶಂಕುಚಿಪ್ಪಿನ ಮೇಲೆ ಚಿತ್ರ ಬಿಡಿಸಿದಂತಿದೆ. ವಿವಿಧ ಬಣ್ಣಗಳ ಜಟಿಲ ಕಲಾಕೃತಿಯ ಪ್ರಕಾರವೇ ಈ ಬಗೆಯ ಶಂಕುಹುಳಗಳ ಹೆಮ್ಮೆ! ಅದೆಷ್ಟು ತಾಳ್ಮೆಯಿಂದ ಬಣ್ಣ ಬಣ್ಣಗಳಲ್ಲಿ ಕಲಾಕಾರ ಕಲೆ ಬಿಡಿಸಿದ್ದಾನೆ ಅನಿಸುತ್ತದೆ. ಹಾಗೆಯೆ ಈ ಶಂಕುಹುಳಗಳೂ ಅದೆಷ್ಟು ತಾಳ್ಮೆಯಿಂದ ಅಲುಗಾಡದೆ ಕಲಾಕಾರ ಕಲೆ ಬಿಡಿಸುತ್ತಿದ್ದರೆ ಸಹಕರಿಸಿದೆ ಎಂದೆನಿಸದೇ ಇರುವುದಿಲ್ಲ. ಇಂತಹ ಜೀವಂತ ಕಲೆಯನ್ನು ಮೈಮೇಲೆ ಹೊತ್ತ ಶಂಕುಹುಳ, ಮಂದಗತಿಯಲ್ಲಿ ಸಾಗುತ್ತಿದ್ದರೆ ರಾಜಕುಮಾರ ಮೆರವಣಿಗೆ ಹೊರಟಂತೆ ಭಾಸವಾಗುತ್ತದೆ. ಹೊಟ್ಟೆಯೇ ಪಾದವಾಗಿಸಿಕೊಂಡು ನಿಧಾನವಾಗಿ ಚಲಿಸುತ್ತಿದ್ದರೆ ಅದೊಂದು ರಾಜಗಾಂಭೀರ್ಯ ನಡೆ! ಹಾಗೆ ಚಲಿಸುವಾಗ ಆಸರೆಗೂ ಹೊಟ್ಟೆಗೂ ಘರ್ಷಣೆಯಾಗದಿರಲು ಲೋಳೆ ಸುರಿಸುತ್ತಾ ಸಾಗುತ್ತವೆ.

ಕ್ಯೂಬಾ ಪೇಂಟೆಡ್ ಬಸವನಹುಳ ಗಾತ್ರದಲ್ಲಿ ಸಾಮಾನ್ಯ ಶಂಕುಹುಳಕ್ಕಿಂತಲೂ ದೊಡ್ಡದು. ಮೂಳೆರಹಿತ ಮೃದು ಮೈ. ಅಕಶೇರುಕ. ಮೈಮೇಲೆ ಭಾರವಾದ ಗಟ್ಟಿಯಾದ ಸುರುಳಿಯಾಕಾರದ ಶಂಕುಚಿಪ್ಪೆ! ಚಿಪ್ಪೆ ಬಾಯಿರಂಧ್ರ ಬಿಟ್ಟು ಮಿಕ್ಕೆಲ್ಲಾ ಮೈಭಾಗವನ್ನೂ ಮುಚ್ಚಿರುತ್ತದೆ. ಶಂಕುಚಿಪ್ಪೆ ಸುಮಾರು 20 ಮೀ.ಮೀ. ಉದ್ದ ಇರುತ್ತದೆ. ಈ ದೊಡ್ಡ ಗಾತ್ರದ ಶಂಕುಚಿಪ್ಪೆ ಹೊಳೆಯುತ್ತಿರುತ್ತದೆ. ಗಾಢ ಬಣ್ಣದಲ್ಲಿರುತ್ತದೆ. ಸಾಧಾರಣವಾಗಿ ಹೊಳೆಯುವ ಹಳದಿ ಮೂಲ ಬಣ್ಣ! ಅದರ ಮೇಲೆ ಬಿಳಿಪಟ್ಟೆಗಳು! ಪೊಲಿಮಿಟಾ ತಳಿಯ ಬೇರೆ ಬೇರೆ ಪ್ರಭೇದಗಳು ಬಹುಬಣ್ಣ ಪಟ್ಟೆ, ನೂಲುಗಳ ಬಹುಸ್ವರೂಪಿಗಳಾಗಿರುತ್ತವೆ. ಅವು ವಾಸಿಸುವ ಪ್ರದೇಶ, ಪರಿಸರ, ಅವು ತೆಗೆದುಕೊಳ್ಳುವ ಆಹಾರದ ಮೇಲೆ ಬಣ್ಣಗಳು ಮೂಡುತ್ತವೆ. ಶಿಕಾರಿ ಪ್ರಾಣಿಪಕ್ಷಿಗಳು, ಮನುಷ್ಯರಿಂದ ಪಾರಾಗಲು, ಶಿಕಾರಿಗಳಿಗೆ ತಬ್ಬಿಬ್ಬು ಉಂಟುಮಾಡಲು ಈ ಶಂಕುಚಿಪ್ಪೆ ಬಣ್ಣಗಳು ಒಂದು ಕಲಾರೂಪದಲ್ಲಿ ಮೂಡುತ್ತವೆ ಎಂಬುದು ಕೆಲವು ಸಂಶೋಧಕರ ಅಭಿಪ್ರಾಯ. ಅಪಾಯ ಎದುರಾದ ಪರಿಸ್ಥಿತಿಯಲ್ಲಿ ಕ್ಯೂಬಾ ಪೇಂಟೆಡ್ ಶಂಕುಹುಳ ತನ್ನ ತಲೆ ಸೇರಿದಂತೆ ಇಡೀ ಶರೀರವನ್ನು ಶಂಕುಚಿಪ್ಪಿನೊಳಕ್ಕೆ ಎಳೆದುಕೊಂಡು ತನ್ನನ್ನು ತಾನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತದೆ! ಇವುಗಳ ಬದ್ಧ

